

# ಇದು ಬರೀ ಶಿಲೆಯಲ್ಲ; ಅದ್ಭುತ ಪ್ರೇಮ ಕಾವ್ಯ!



ಈಜಿಪ್ಟ್‌ನ ಪಿರಮಿಡ್ ಜಗತ್ತಿನ ವಿಸ್ಮಯಗಳಲ್ಲಿ ಒಂದು. ಐರ್ಲ್ಯಾಂಡ್ ಕಣಿವೆಯಲ್ಲಿ ಇದಕ್ಕಿಂತ ಮೊದಲೇ ಒಂದು ಅದ್ಭುತ ಲೋಕ ಅನಾವರಣ ಆಗಿತ್ತು. ನಿಸರ್ಗದ ಶಿಲಾ ಪರ್ವತದಲ್ಲಿ ಪ್ರೇಮ ಕಾವ್ಯ ಕಲಾ ಪ್ರತಿಮೆಗಳು ಅಲ್ಲಿ ಅರಳಿ ನಿಂತಿವೆ. ಸರಿ ಸುಮಾರು ಮೂರು ಸಾವಿರ ವರ್ಷಗಳ ಹಿಂದೆ 'ಲವ್ ಆಫ್ ವ್ಯಾಲಿ' ನಿರ್ಮಾಣ ಆಗಿದೆ ಎನ್ನಲಾಗುತ್ತಿದೆ. ಇದಕ್ಕೆ 'ಸಂತೋಷ ಸ್ಮಾರಕ' ಎಂದೂ ಕರೆಯಲಾಗುತ್ತದೆ.

ಸ್ಥಳನಾಮಕ್ಕೆ ಸಂಬಂಧಿಸಿದಂತೆ ವಿವರಗಳು ಏನೇ ಇದ್ದರೂ ಅದರ ಹಿಂದಿನ ಉದ್ದೇಶ ತುಂಬಾ ಮಹತ್ವದ್ದಾಗಿದೆ. ಶಿಲ್ಪ ಸಂವಹನ ಬದುಕಿಗೆ ಪ್ರೇರಕವಾಗಲಿ, ಸ್ಫೂರ್ತಿಯ ಚಿಲುಮೆ ಚಿಗುರೊಡೆಯಲಿ ಎಂಬ ಆಶಯ ಅಡಗಿದೆ ಎಂಬುದು ಇತಿಹಾಸ ತಜ್ಞರ ಅಭಿಪ್ರಾಯ.

ಇದರ ನಿರ್ಮಾತೃಗಳ ಬಗ್ಗೆಯೂ ಜಿಜ್ಞಾಸೆಗಳಿವೆ. ಬುಡಕಟ್ಟು ಸಮುದಾಯದ ಸಾಮೂಹಿಕ ಪ್ರಯತ್ನದಿಂದ ಬೆಟ್ಟ ಕರಗಿ ಕಲಾ ಸೌಧವಾಗಿದೆ ಎಂಬುದು ತಜ್ಞರ ಅಭಿಮತ. ಕಣಿವೆಯ ಶಿಲೆಯಲ್ಲಿ ಪ್ರೇಮಕಾವ್ಯ ಅರಳಿದೆ, ಕಲಾವಂತಿಕೆ ವಿಸ್ಮಯ ಹುಟ್ಟಿಸಿದೆ. ಜಗತ್ತಿನ ಅದ್ಭುತ ಪರಂಪರೆಗೆ ಅನಾಮಧೇಯರ ಪ್ರೇಮ ಕಣಿವೆಯ ಕಲಾ ಕೃತಿಗಳು ಇಂದಿಗೂ ಸಾಕ್ಷಿಯಾಗಿ ನಿಂತಿವೆ.

★ ಆರ್ಕೆ